

ಫ್ಯಾಷನ್ ಜಗತ್ತು ಇಂದು ಅಭೂತಪೂರ್ವವಾಗಿ ಬದಲಾಗಿದೆ. ಆಶ್ಚರ್ಯ ಎಂದರೆ ಬಟ್ಟೆಬರೆಗಳು ಅದನ್ನು ತೊಟ್ಟು ಕೊಳ್ಳುವ ಜನ ತಮ್ಮ ತಮ್ಮ ವೃತ್ತಿಗೆ ಅನುಗುಣವಾಗಿ ತಮ್ಮ ತಮ್ಮನ್ನು ಬಿಂಬಿಸಿದರೂ ಸಮಾರಂಭಗಳಿಗೆ ಹೋದಾಗ ನಾ ಸುಂದರ ನಾ ಅತಿ ಸುಂದರ ಎಂದು ಕಾಣಲು ಹಾತೊರೆಯುವ ಪುರುಷರು ಇಂದು ಎಲ್ಲಕಡೆ ಕಾಣಸಿಗುತ್ತಾರೆ. ಇಂದಿನ ಈ ಯುಗದಲ್ಲಿ ಪುರುಷರೂ ತಮ್ಮ ದಿರಿಸುಗಳಲ್ಲಿ, ಆಭರಣಗಳಲ್ಲಿ, ಮುಖದ ಸೌಂದರ್ಯ, ಹೇರ್ ಸ್ಟೈಲ್, ಪಾದರಕ್ಷೆ ಎಲ್ಲಾ ಅಲಂಕಾರಿಕ ವಸ್ತುಗಳಿಗೂ ಪ್ರಾಮುಖ್ಯತೆ ನೀಡುತ್ತಿದ್ದಾರೆ. ಅಲ್ಲದೆ ಈ ಫ್ಯಾಷನ್ ಅನ್ನು ರೂಪಿಸಲು ಮಹಿಳೆಯರೂ ಪಾಲುದಾರರು ಎಂಬುದು ನಿಸ್ಸಂಶಯ.

ಪುರುಷರ ಆಭರಣ ಮಹಿಳೆಯರಿಗಿಂತ ಸ್ವಲ್ಪ ವಿಭಿನ್ನವಾದದ್ದು. ಕೆಲವು ಸರಗಳನ್ನು, ಪೆಂಡೆಂಟ್‌ಗಳನ್ನು ಪುರುಷ, ಮಹಿಳೆ ಇಬ್ಬರೂ ಧರಿಸಬಹುದು. ಇನ್ನು ಕೆಲವು ಕೇವಲ ಪುರುಷರಿಗಾಗಿ ವಿಭಿನ್ನವಾಗಿ ವಿನ್ಯಾಸಗೊಳಿಸಿದ್ದಂತಹದ್ದು.

ಪುರುಷರ ಅತ್ಯಂತ ಪ್ರಿಯ ಆಭರಣ ಎಂದರೆ ಮುಂಗೈ ಸರಪಳಿ (ಬ್ರೇಸ್ಲೆಟ್) ಮತ್ತು ಜೊತೆಗೆ ಒಂದು ಉಂಗುರ. ಇದಿಷ್ಟು ಸಾಕು ಸುಂದರವಾಗಿ ಮನೋಹರವಾಗಿ ಒಳ್ಳೆಯ ನೋಟ ಕೊಡಲು. ಕೆಲವರು 2 ಕೈಗೂ 2 ಉಂಗುರ ಧರಿಸುವುದಿದೆ. ಸರವೂ 2, 3 ಧರಿಸುವವರೂ ಇದ್ದಾರೆ. ಕೈಗೆ ಸಾಮಾನ್ಯವಾಗಿ ಕಡಗವೊ, ಮುಂಗೈ ಸರಪಳಿ ಒಂದೇ ಧರಿಸುವುದು ವಾಡಿಕೆ.

## ಬ್ರೇಸ್ಲೆಟ್

ಪುರುಷರ ಆಭರಣ ಸಾಮಾನ್ಯವಾಗಿ ಸ್ವಲ್ಪ ಅಗಲವಾಗಿದ್ದು ಕೈಯ ಮುಂಭಾಗದಲ್ಲಿ ಸ್ವಲ್ಪ ಸಡಿಲವಾಗಿರಬೇಕು. ಆದಷ್ಟು ಭದ್ರವಾಗಿ ನಿಂತುಕೊಳ್ಳುವ ಲಾಕ್ ಇರುವ ಹುಕ್ ಅನ್ನು ಬಳಸಬೇಕು. ಕೆಲವು ಹುಕ್‌ಗಳು ಒಂದು ಬದಿಯಿಂದ ಓಪನ್ ಆಗಿ ಬಿದ್ದು ಹೋಗುತ್ತದೆ. ಹಲವಾರು ಮಂದಿ ಬೈಕ್‌ನಲ್ಲಿ ಹೋಗುವಾಗ ಕಳೆದುಕೊಳ್ಳುವ ಸಂಭವವಿದೆ. ಬಟ್ಟೆಗೆ ಸಿಕ್ಕಿ ಎಳೆದು ಬಿದ್ದು ಹೋದದ್ದೇ ತಿಳಿಯುವುದಿಲ್ಲ. ಆದುದರಿಂದ ಲೋಬಸ್ಟರ್ ಡಬಲ್ ಲಾಕ್ ಬಳಸಿ. ಪ್ರಸಿದ್ಧವಾದ ಆಭರಣಗಳು ಅಡ್ಡಿಗೆ, ಸಚಿನ್, ರುದ್ರಾಕ್ಷಿ, ಕಾರ್ಟಿಯರ್, ಡೆಲ್ಲಿ ಚೈನ್, ಬ್ರೇಸ್ಲೆಟ್‌ಗಳು ಪ್ರಸಿದ್ಧವಾಗಿದ್ದು ತುಂಬಾ ಬಳಕೆಯಲ್ಲಿರುವಂತಹದ್ದು. ಕೆಲವು ಹಗುರವಾದ ಬ್ರೇಸ್ಲೆಟ್‌ಗಳು ಇವೆ. ಇವು ಕಾಣಲು ದೊಡ್ಡದಾಗಿದ್ದು ಹಗುರವಾಗಿರುತ್ತದೆ. ಆದರೆ ನಿತ್ಯ ಬಳಕೆಗೆ ಸ್ವಲ್ಪ ಸದೃಢವಾದ ಆಭರಣ ಉತ್ತಮ.



## ಉಂಗುರ

ಪುರುಷರ ಉಂಗುರಗಳಲ್ಲಿ ತುಂಬಾ ವಿಧಗಳಿವೆ. ಪವಿತ್ರ ಉಂಗುರ, ಪೈಯನ್ನೂರು ಪವಿತ್ರ, ನವರತ್ನದ ಉಂಗುರ, ಜಾತಕ ಅನುಸಾರ ಬಳಸುವ ರೂಬಿ, ಎಮರಾಲ್ಡ್, ನವರತ್ನಗಳ ಉಂಗುರ, ಟೀವಿ ರಿಂಗ್, ಕಾಸ್ಟಿಂಗ್ ಉಂಗುರ, ವೀಣೆ ಉಂಗುರ (ಹಳೆಯ ಕಾಲದ) ಎನಾಮಲ್ ಪೈಂಟ್ ಬಳಸಿದ ಉಂಗುರ, ಪ್ರಾಣಿ, ಪಕ್ಷಿಗಳನ್ನು ಚಿತ್ರಿಸಿದ ಉಂಗುರ... ಇವುಗಳು ಬಹಳ ಪ್ರಸಿದ್ಧವಾದ ವಿನ್ಯಾಸಗಳು. ಆದಷ್ಟು ಉಂಗುರಗಳು ಬೆರಳಿನ ಆಕಾರಕ್ಕೆ ಹೊಂದುವಂತಿರಲಿ. ನಿತ್ಯ ಬಳಕೆಗೆ ಪ್ಲೈನ್ ವಿನ್ಯಾಸ ಇರಲಿ. ಜೊತೆಗೆ ವೆಡ್ಡಿಂಗ್ ಉಂಗುರ, ಎಂಗೇಜ್ಮೆಂಟ್ ಉಂಗುರ ಅಂತ ಅದಕ್ಕೆ ಅದರದ್ದೇ ಆದ ಜೋಡಿ ಉಂಗುರದ ವಿನ್ಯಾಸ ಇದೆ. ಇದು ನಮ್ಮೊಳಗಿನ ಪ್ರೇಮವನ್ನು, ಭಾವನೆಯನ್ನು, ಕಲ್ಪನಾಶೀಲತೆಯನ್ನು, ಅನಿಸಿಕೆಗಳನ್ನು, ಪ್ರಣಯ ಪ್ರವೃತ್ತಿಯನ್ನು, ರಸಿಕತೆಯನ್ನು ಸೂಚಿಸುತ್ತದೆ. ಬಂಧನ ಗಟ್ಟಿಯಾಗಿಸುತ್ತದೆ.

## ಸರಗಳು

ಸಾಧಾರಣ ನಿತ್ಯ ಬಳಕೆಗೆ ಸಪೂರದ ರೇಡಿಯೊ, ಸ್ಟೀರ್, ದಳಪತಿ, ಕಟ್ಸ್, ಗೋಪು, ಅಡ್ಡಿಗೆ ಚೈನಿನಂತಹದ್ದು ಬಳಸಿದರೆ ಅಗಲದ ಕೇಶವಾಭರಣ, ಚಂದ್ರಮುಖಿ ಚೈನ್, ಕನಕಮಾಲೆ, ಅಶ್ವಿನಿ ಚೈನ್, ಧ್ರುವ ಚೈನ್‌ಗಳನ್ನು ತಮ್ಮ ಫ್ಯಾಷನ್‌ಗೋಸ್ಕರವಾಗಿ ಬಳಸಬಹುದು. ಹುಡುಗರು, ಕಾಲೇಜು ಮಕ್ಕಳು ಆದಷ್ಟು ತೆಳ್ಳಗಿನ ಆದರೆ ಸ್ವಲ್ಪ ಮಟ್ಟಿಗಾದರೂ ಸದೃಢವಾದ ಸರಗಳನ್ನು ಬಳಸುವುದು ಒಳಿತು. ಏಕೆಂದರೆ ಮಕ್ಕಳು ಸರ ಬಿದ್ದು ಹೋದರೂ ಗಮನಹರಿಸುವುದಿಲ್ಲ. ಪುರುಷರು ತಮಗೆ ಇಷ್ಟವಾದ ಸರಗಳನ್ನು ಧರಿಸಬಹುದು. ಹುಕ್‌ಗಳು ಸದೃಢತೆಯಿಂದ ಇರಲಿ. ಚೈನಿನ ಬೆಸುಗೆ ಬಿಟ್ಟಲ್ಲಿ ಅಸಡ್ಡೆ ಮಾಡದೆ ಬೆಸುಗೆ ಹಾಕಿಸುವುದನ್ನು ಮರೆಯಬಾರದು.

'ಯಾರು ನಮ್ಮಿಂದ ಮುಂದಿದ್ದಾರೆ, ಯಾರು ನಮಗಿಂತ ಹಿಂದಿದ್ದಾರೆ ಎಂದು ಯೋಚಿಸುವುದಕ್ಕಿಂತ ಯಾರು ನಮ್ಮ ಜೊತೆಗಿದ್ದಾರೆ' ಎನ್ನುವುದೇ ಮುಖ್ಯ. ಹಾಗಾಗಿ ಬಾಂಧವ್ಯ ಉಳಿಸಿಕೊಳ್ಳುವ ಪ್ರೀತಿಯ ಜನರೊಂದಿಗೆ ಚಿನ್ನವೂ ನಮ್ಮೊಂದಿಗೆ ಇದ್ದರೆ ಚೆನ್ನ ಎಂದು ಪುರುಷರು ತಮ್ಮ ಒಳಿತಿಗಾಗಿ ಆಭರಣ ಇರಲಿ ಎಂಬ ಬಗ್ಗೆ ಗಮನಹರಿಸಬಹುದು. ಬಟ್ಟೆ ಬರೆಗಳು, ಮನೆಯ ಅಲಂಕಾರ ಎಲ್ಲವೂ ಜೀವನದಲ್ಲಿ ಬೇಕು ಆದರೆ ಸಂಗ್ರಹಣೆಗೆ ಯೋಗ್ಯವಾದ ವಿಷಯಗಳನ್ನು ಮನದಲ್ಲಿ ಇಟ್ಟುಕೊಳ್ಳಬೇಕು. ಬಂಗಾರ, ಬಂಗಾರದಂತಹ ಬೆಳೆ ತೆಗೆಯಬಹುದಾದ ಕೃಷಿ ಭೂಮಿ, ವಿದ್ಯೆ ಇದು ಮೂರಕ್ಕೂ ಬಳಸಿದ ನಮ್ಮ ದುಡಿಮೆಯ ಹಣ ಎಂದೂ ವ್ಯರ್ಥವಾಗುವುದಿಲ್ಲ. ಚಿಕ್ಕ ವಯಸ್ಸಿನಲ್ಲೇ ಜಂಕ್ ಫುಡ್‌ಗೆ ನಾವು ನೀಡುವ ಹಣದ ಅರ್ಧವನ್ನು ಶೇಖರಣೆ ಮಾಡಿದರೆ ಸಾಕು. ಅನಗತ್ಯ ಖರೀದಿ ಮಾಡಿದ ಕೆಲವು ವಸ್ತುಗಳನ್ನು ಬಳಸದೆ ಹಾಗೆಯೇ ಇಡುತ್ತೇವೆ. ಅದಕ್ಕೆ ಬಳಸಿದ ಹಣವನ್ನು ಶೇಖರಿಸಿ ಅದರಿಂದ ಬಂಗಾರ ತೆಗೆಯುವಂತೆ ಮುಂದಿನ ಜನರೇಶನ್ (ಪೀಳಿಗೆ)ನ ನವಯುವಕರನ್ನು ಹೆತ್ತವರು ಪ್ರೇರೇಪಿಸಿದರೆ ಸಾಕು, ಜೀವನ ಸುಗಮ. ಪುರುಷರ ಆಭರಣ ಸಾಧಾರಣವಾಗಿ ಹರಳುಗಳು ಕಡಿಮೆ ಇದ್ದು, ಕೇವಲ ಚಿನ್ನವೇ ಹೆಚ್ಚಿನ ಪ್ರಮಾಣದಲ್ಲಿ ಇರುತ್ತದೆ. ಆದ್ದರಿಂದ ಪುನಃ ವಿಕ್ರಯಿಸುವಾಗ ಅದೇ ಮೌಲ್ಯ ಅಥವಾ ಚಿನ್ನದ ಈಗಿನ ಬೆಲೆಯನ್ನು ಹೊಂದಿಕೊಂಡು ಹೆಚ್ಚಿನ ಮೌಲ್ಯ ಲಭ್ಯವಾಗುತ್ತದೆ ಎನ್ನುವುದನ್ನು ಮರೆಯಬಾರದು. ■